

# ಪ್ಲಾಸ್ಟಿಕ್ ಕ್ರೀಡಾಂಗಣ..!

ಬೀದಿಗಳ ಕಸದ ರಾಶಿಯಲ್ಲಿ ಸೇರಿಕೊಂಡು ಪರಿಸರಕ್ಕೆ ಹಾನಿ ತರುವ ಪ್ಲಾಸ್ಟಿಕ್ ಚೂರುಗಳು ತೀವ್ರ ತಲೆನೋವು ತರುವ ಸಮಸ್ಯೆಯಾಗಿವೆ. ಆದರೆ ಕಲಾವಿದ ಚೊಯ್ ಜಿಯೊಂಗ್ ಹ್ವಾ ಇಂತಹ ಚೂರುಗಳನ್ನು ಸಂಗ್ರಹಿಸಿ ಒಂದು ದೈತ್ಯ ಕ್ರೀಡಾಂಗಣವನ್ನು ಸಿಂಗಾರಗೊಳಿಸಿಬಿಟ್ಟ.

ದಕ್ಷಿಣ ಕೊರಿಯಾದ ಸಿಯೋಲ್‌ನಲ್ಲಿ ಜಮ್ಸಿಲ್ ಕ್ರೀಡಾಂಗಣವಿದೆ. ಇಲ್ಲಿ ಒಲಿಂಪಿಯಾಡ್ ಪಂದ್ಯಗಳು ನಡೆಯುವ ಸಂದರ್ಭದಲ್ಲಿ ಅಲಂಕರಣದ ಜವಾಬ್ದಾರಿ ವಹಿಸಿಕೊಂಡದ್ದು ಗೋಡ್ಸಮ್ ಎಂಬ ಸಾರ್ವಜನಿಕ ಕಲೆ ಮತ್ತು ವಿನ್ಯಾಸದ ಕಂಪೆನಿ. ಇದರ ಪರಿಕರಗಳಿಗಾಗಿ ಬಿಡಿಗಾಸನ್ನೂ ಖರ್ಚು ಮಾಡಲಿಲ್ಲ. ಬೀದಿಯ ಕಸದ ರಾಶಿ, ಮನೆ, ಅಂಗಡಿ ಮತ್ತು ಕಚೇರಿಗಳಿಂದ ಬಿಸುಡುವ ಪ್ಲಾಸ್ಟಿಕ್ ಅವಶೇಷಗಳನ್ನು ಸಂಗ್ರಹಿಸಿತು.

ಬಕೆಟ್, ಗೊಂಬೆ, ಬಾಟಲಿ ಮುಂತಾದ ಪ್ಲಾಸ್ಟಿಕ್ ತಯಾರಿಕೆಯ ವಸ್ತುಗಳನ್ನು ಸಂಗ್ರಹಿಸಿದ್ದು 488 ಟ್ರಕ್ ಗಳಷ್ಟು. 40 ದಿನಗಳ ಕೆಲಸ, 3600 ಜನರ ಶ್ರಮ. ಜೊತೆಗೆ ಅಲಂಕರಣಕ್ಕೆ 1,763, 360 ನಾಣ್ಯಗಳನ್ನು ಉಪಯೋಗಿಸಿ ಇದರಿಂದ ಬಹು ಜನಾಕರ್ಷಕವಾದ ಸುಂದರ ಸಿಂಗಾರ ಮನ ರಂಜಿಸಿತು. ಬಳಸಿದ ತುಣುಕುಗಳ ಸಂಖ್ಯೆ 1.7 ದಶಲಕ್ಷ ಇತ್ತು. ನೆಲದ ಏರು ತಗ್ಗುಗಳನ್ನು ಕೂಡ ವರ್ಣಮಯ ತುಣುಕುಗಳಿಂದ ಭರ್ತಿ ಮಾಡಲಾಯಿತು.

■ ಪರಾಶಾ



